ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೇಮಂತ್ ಚಂದನ್ ಗೌಡರ್

ಚಂದಮ್ಮ-ವಿರುದ್ಧ ಶಿವಲಿಂಗಪ್ಪ ಮತ್ತು ಇತರರು

ರಿಟ್ ಅಪೀಲುಸಂಖ್ಯೆ: 200574/2018 (ಜಿಎಮ್-ಸಿಪಿಸಿ), ದಿನಾಂಕ 19 ನೇ ಡಿಸೆಂಬರ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್:

ಹಿರಿಯ ಸಿವಿಲ್ ನ್ಯಾಯಾಧೀಶರು, ಸೇಡಂ ಇವರ ಕಡತದಲ್ಲಿನ ಮೊಕದ್ದಮೆಸಂಖ್ಯೆ: 47/2012 ರ ಅಮಲ್ದಾರಿಯಲ್ಲಿ ಡಿಕ್ರಿಧಾರಕರ ಸೂಚನೆಯ ಮೇರೆಗೆ ಈ ರಿಟ್ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.ಈ ರಿಟ್ ಮೇಲ್ಮನವಿಯ ವಿಲೆಗೆ ಸಂಬಂಧಿಸಿದ ಅವಶ್ಯಕ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

ಚಂದಮ್ಮ ಎಂಬಾಕೆಯು, ಸೇಡಂ ತಾಲೂಕಿನ ಕುಕುಂದ ಗ್ರಾಮದಲ್ಲಿರುವ ಸರ್ವೆಸಂಖ್ಯೆ: 5/1 9, 18, 26 ಮತ್ತು 64/ 1 ರಲ್ಲಿರುವ ಕೃಷಿ ಜಮೀನುಗಳ ಸ್ವಲ್ಪ ಭಾಗ ಹಾಗೂ ಮನೆ ಸ್ವತ್ತಿನ ಸಂಬಂಧದಲ್ಲಿ ತನ್ನ ಸ್ವಾಮ್ಯ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಘೋಷಣೆಯ ಪರಿಹಾರವನ್ನು ಕೋರಿ, ಕಲಬುರ್ಗಿಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆಸಂಖ್ಯೆ: ಒ.ಎಸ್ .70/1992 ನ್ನು ಹೂಡಿದ್ದರು.ಅಮಲ್ದಾರಿ ಅರ್ಜಿಯಲ್ಲಿನ ತೀರ್ಪು ಋಣಿಗಳು ಸದರಿ ದಾವೆಯಲ್ಲಿ ಎದುರುದಾರರಾಗಿದ್ದರು.ದಿನಾಂಕ: 28.02.1992 ರಂದು ಸದರಿ ದಾವೆಯು ಆಕೆಯ ಪರವಾಗಿ ಡಿಕ್ರಿಯಾಯಿತು ಮತ್ತು ಅದರಿಂದ ಬಾಧಿತರಾಗಿ ತೀರ್ಪು ಋಣಿಗಳು ಕಲಬುರಗಿ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯಕ್ಕೆ ಆರ್.ಎ. 3/1997 ರಲ್ಲಿ ಮೇಲ್ಮನವಿ ಸಲ್ಲಿಸಿದರು.ದಿನಾಂಕ: 20.07.2001 ರಂದು ಸದರಿ ಮೇಲ್ಮನವಿಯನ್ನು ವಜಾಗೊಳಿಸಲಾಯಿತು.ಮೂರನೇ ತೀರ್ಪು ಋಣಿಯಾದ ಶರಣಪ್ಪನು ತಾನು ಚಂದಮ್ಮಳ ದತ್ತು ಮಗನಾಗಿರುವುದಾಗಿ ಘೋಷಣೆಯನ್ನು ಕೋರಿ, ಆಕೆಯ ವಿರುದ್ಧ ಸೇಡಂನ ಸಿವಿಲ್ ನ್ಯಾಯಾಧೀಶರ (ಕಿರಿಯ ದರ್ಜೆ) ನ್ಯಾಯಾಲಯದಲ್ಲಿ ದಾವೆಸಂಖ್ಯೆ: ಒ.ಎಸ್. 15/1992 ನ್ನು ಸಹ ಹೂಡಿದ್ದರು.ಸದರಿ ದಾವೆಯನ್ನುದಿನಾಂಕ: 15.01.2002 ರಂದು ವಜಾಗೊಳಿಸಲಾಯಿತು ಮತ್ತು ಅದರಿಂದ ಬಾಧಿತರಾಗಿ ಅವರು ಸಿವಿಲ್ ನ್ಯಾಯಾಧೀಶರ (ಹಿರಿಯ ದರ್ಜೆ) ನ್ಯಾಯಾಲಯಕ್ಕೆ ಮೇಲ್ಮನವಿಸಂಖ್ಯೆ: ಆರ್.ಎ. 219/2002 ನ್ನು ಹೂಡಿದ್ದರು.ಈ ಮೇಲ್ಮನವಿಯು ಇತ್ಯರ್ಥದಲ್ಲಿರುವಾಗ, ಚಂದಮ್ಮಳು ಮೃತಳಾಗಿದ್ದು, ಬಸವರಾಜ್ ಹೆಸರಿನ ಇದರಲ್ಲಿನ ಮೇಲ್ಮನವಿದಾರರು ಆಕೆಯ ಕಾನೂನುಬದ್ಧ ಪ್ರತಿನಿಧಿಯಾಗಿ ದಾಖಲೆಗೆ ಬಂದಿರುವರು.ದಿನಾಂಕ: 06.03.2008 ರಂದು ಮೇಲ್ಮನವಿಸಂಖ್ಯೆ: ಆರ್.ಎ. 219/2002 ನ್ನು ವಜಾಗೊಳಿಸಲಾಗಿತ್ತು.ಆ ನಂತರ ಮೂರನೇ ತೀರ್ಪು ಋಣಿಯು, ಉಚ್ಚ ನ್ಯಾಯಾಲಯಕ್ಕೆ ಎರಡನೇ ಮೇಲ್ಮನವಿ ಆರ್ಎಸ್ಸಂಖ್ಯೆ: 1341/2008 ನ್ನು ಸಲ್ಲಿಸಿದ್ದು, ಅದನ್ನುದಿನಾಂಕ: 30.08.2010 ರಂದು ವಜಾಗೊಳಿಸಲಾಗಿತ್ತು.

2. ತನ್ನ ಸ್ವಾಧೀನಾನುಭೋಗದಲ್ಲಿ ತೀರ್ಪು ಋಣಿಗಳು ಹಸ್ತಕ್ಷೇಪ ಮಾಡಿದ್ದು, ಅದರಿಂದ ಒ.ಎಸ್.ಸಂಖ್ಯೆ: 70/1992 ರಲ್ಲಿರುವ ಡಿಗ್ರಿಯನ್ನು ಅವರು ಉಲ್ಲಂಘಿಸಿರುವರು ಎಂದು ಆರೋಪಿಸಿ, ಮೇಲ್ಮನವಿದಾರರು ಸಿವಿಲ್

ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತವಾಗಿ ' ಸಿಪಿಸಿ) 32 ನೇ ನಿಯಮದ XXI ನೇ ಕ್ರಮಾದೇಶದ ಮೇರೆಗೆ ಅಮಲ್ಜಾರಿಯನ್ನು ಪ್ರಾರಂಭಿಸಿ, ತೀರ್ಪು ಋಣಿಗಳ ಸಿವಿಲ್ ಬಂಧನವನ್ನು ಕೋರಿದ್ದಾರೆ.ಅಮಲ್ದಾರಿ ನ್ಯಾಯಾಲಯವುದಿನಾಂಕ: 09.10.2017 ರಂದು ಆದೇಶವನ್ನು ಹೊರಡಿಸುವ ಮೂಲಕ ಅಮಲ್ಜಾರಿ ಅರ್ಜಿಯು ಊರ್ಜಿತಯೋಗ್ಯವಾಗಿಲ್ಲವೆಂದು ವಜಾಗೊಳಿಸಿದೆ.ಇದರಿಂದ ಬಾಧಿತರಾಗಿ, ಡಿಕ್ರಿಧಾರಕರು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಸಂಖ್ಯೆ: 208202/2017 ರಲ್ಲಿ ಈ ರಿಟ್ ಅರ್ಜಿಯನ್ನು ಹೂಡಿದ್ದು,ದಿನಾಂಕ: 27.06.2018 ರಂದು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದ್ದರಿಂದ, ಡಿಕ್ರಿಧಾರಕರು ಈ ರಿಟ್ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

3. ಮೇಲ್ಮನವಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಅಮೀತ್ ಕುಮಾರ್ ದೇಶಪಾಂಡೆ ಹಾಗೂ ಪ್ರತಿವಾದಿಗಳ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಮನವೇಂದ್ರ ರೆಡ್ಡಿ ಮತ್ತು ಡಿ.ಪಿ. ಅಂಬೇಕರ್ ಇವರ ವಾದಗಳನ್ನು ನಾವು ಆಲಿಸಿದ್ದೇವೆ.

4. ಡಿಕ್ರಿಧಾರಕರು ಈ ಮೊದಲೇ ಒ.ಎಸ್.ಸಂಖ್ಯೆ: 70/1992 ರಲ್ಲಿರುವ ಡಿಕ್ರಿ ಉಲ್ಲಂಘನೆಯಾಗಿದೆ ಎಂದು ಫಿರ್ಯಾದು ಮಾಡಿ 12/2009 ರಲ್ಲಿ ಅಮಲ್ದಾರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅಮಲ್ದಾರಿ ಅರ್ಜಿಯನ್ನು ವಜಾಗೊಳಿಸಲಾಗಿದೆ ಎಂಬುದು ರಿಟ್ ಅರ್ಜಿಯನ್ನು ವಜಾಗೊಳಿಸಿದ್ದಕ್ಕೆ ಕಾರಣವಾಗಿದೆ.ಅಮಲ್ದಾರಿ ಅರ್ಜಿಸಂಖ್ಯೆ: 47/2012 ಇದು, ಅದೇ ಡಿಕ್ರಿಯ ಸಂಬಂಧದಲ್ಲಿ ಅದೇ ಪರಿಹಾರವನ್ನು ಕೋರಿ ಡಿಕ್ಕಿಧಾರಕರು ಸಲ್ಲಿಸಿದ ಎರಡನೇ ಅಮಲ್ಜಾರಿ ಆದೇಶವಾಗಿರುವುದರಿಂದ, ಎರಡನೇ ಅಮಲ್ದಾರಿ ಅರ್ಜಿಯು ಊರ್ಜಿತಯೋಗ್ಯವಾಗಿಲ್ಲ.ಇದಲ್ಲದೆ, ಡಿಕ್ರಿಧಾರಕರು ಮೊದಲನೇ ಅಮಲ್ದಾರಿ ಅರ್ಜಿಯು ವಜಾಗೊಂಡ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ, ಇಲ್ಲಿ ಸಂಗತಿಗಳನ್ನು ಮುಚ್ಚಿಡಲಾಗಿತ್ತು.

5. ಶ್ರೀ ಅಮೀತ್ ಕುಮಾರ್ ದೇಶಪಾಂಡೆಯವರು ಈ ಮುಂದಿನಂತೆ ವಾದಿಸಿದ್ದಾರೆ:

(ಎ) ಅಮಲ್ದಾರಿ ಅರ್ಜಿಯು ಊರ್ಜಿತಯೋಗ್ಯವಲ್ಲವೆಂದು ವಜಾಗೊಳಿಸುವಲ್ಲಿ ಅಮಲ್ಜಾರಿ ನ್ಯಾಯಾಲಯವು ಸಂಪೂರ್ಣವಾಗಿ ತಪ್ಪೆಸಗಿದೆ.ತೀರ್ಪು ಋಣಿಗಳು ಉದ್ದೇಶಪೂರ್ವಕವಾಗಿ ನಿರ್ಬಂಧಕಾಜ್ಞೆಯ ಡಿಕ್ಕಿಯನ್ನು ಉಲ್ಲಂಘಿಸಿದಾಗಲೆಲ್ಲಾ, ಡಿಕ್ಕಿಧಾರಕರು ಸಿಪಿಸಿಯ XXI ನೇ ಕ್ರಮಾದೇಶದ 32 ನೇ ನಿಯಮದ ಉಪಬಂಧಗಳಿಗನುಸಾರವಾಗಿ ಅದನ್ನು ಅಮಲ್ಜಾರಿ ಮಾಡಬಹುದಾಗಿದೆ.ಡಿಕ್ರಿಯನ್ನು ಉಲ್ಲಂಘಿಸಿದ ಪ್ರತಿ ಸಲವೂ, ಅಮಲ್ದಾರಿಯನ್ನು ಪ್ರಾರಂಭಿಸಬಹುದಾಗಿದ್ದು, ಡಿಕ್ರಿಯನ್ನು ಉಲ್ಲಂಘಿಸಲು ತೀರ್ಪು ಋಣಿಗಳು ತರುವಾಯದಲ್ಲಿ ಮಾಡುವ ಪ್ರಯತ್ನಗಳ ಸಂಬಂಧದಲ್ಲಿ ಎರಡನೇ ಸಲಕ್ಕೆ ಅಮಲ್ದಾರಿಯನ್ನು ಪ್ರಾರಂಭಿಸಲು ಡಿಕ್ಕಿಧಾರಕರ ಮಾರ್ಗಕ್ಕೆ ಮೊದಲನೇ ಅಮಲ್ಜಾರಿಯ ವಜಾಗೊಳ್ಳುವಿಕೆಯು ಅಡ್ಡ ಬರುವುದಿಲ್ಲ.ಅಮಲ್ಜಾರಿ ನ್ಯಾಯಾಲಯ ಮತ್ತು ರಿಟ್ ನ್ಯಾಯಾಲಯಗಳೆರಡೂ ಕಾನೂನಿನ ನಿಲುವನ್ನು ಗಮನಿಸಲು ವಿಫಲವಾಗಿವೆ.

(ಬಿ) ಮೇಲ್ಮನವಿದಾರರು, ಪ್ರತ್ಯೇಕ ದಾವೆಯನ್ನು ಹೂಡುವ ಮೂಲಕ ಉಯಿಲಿನ ಆಧಾರದ ಮೇಲೆ ಅವರ ಸ್ವಾಮ್ಯವನ್ನು ಸ್ಥಾಪಿಸದೆ ಡಿಕ್ರಿಯನ್ನು ಅಮಲ್ದಾರಿ ಮಾಡಲಾಗುವುದಿಲ್ಲ ಎಂದು ಅಮಲ್ಜಾರಿ ನ್ಯಾಯಾಲಯವು ತಪ್ಪಾಗಿ ನಿರ್ಣಯಿಸಿದೆ.ಅಪೀಲು ಇತ್ಯರ್ಥದಲ್ಲಿರುವಾಗ, ಚಂದಮ್ಮಳು ಮೇಲ್ಮನವಿದಾರರ ಪರಾವಾಗಿ ಉಯಿಲನ್ನು ಬರೆದುಕೊಟ್ಟಿದ್ದನ್ನು ದಾಖಲೆಗೆ ತರಲಾಗಿತ್ತು.ಅವರನ್ನು ಚಂದಮ್ಮಳ ಕಾನೂನುಸಮ್ಮತ ಪ್ರತಿನಿಧಿಯೆಂದು ಸೇರಿಸುವ ಮೊದಲೇ, ನ್ಯಾಯಾಲಯವು ವಿಚಾರಣೆ ನಡೆಸಿ, ಅವರು

ಚಂದಮ್ಮಳ ಉಯಿಲಿನ ಪ್ರಕಾರ ಆಸ್ತಿ ಪಡೆದವರೆಂಬುದನ್ನು ಮನವರಿಕೆ ಮಾಡಿಕೊಂಡ ನಂತರ ಮಾತ್ರವೇ, ಮೇಲ್ಮನವಿಯಲ್ಲಿ ಅವರ ಹೆಸರನ್ನು ದಾಖಲೆಗೆ ತರಲು ಅನುಮತಿ ನೀಡಿತ್ತು.ಆದುದರಿಂದ, ಮೇಲ್ಮನವಿದಾರರು ಚಂದಮ್ಮಳ ಸಂಪದವನ್ನು ಪ್ರತಿನಿಧಿಸುತ್ತಾರೆ ಹಾಗೂ ಈ ಹಿನ್ನೆಲೆಯಲ್ಲಿ ಅವರು ಸಿಪಿಸಿಯ 146 ನೇ ಪ್ರಕರಣಕ್ಕನುಸಾರವಾಗಿ ನಿರ್ಬಂಧಕಾಜ್ಞೆ ಸಂಬಂಧದಲ್ಲಿನ ಡಿಕ್ರಿಯನ್ನು ಈ ಅಮಲ್ದಾರಿ ಮಾಡಬಹುದಾಗಿದೆ.ಘೋಷಣೆಗಾಗಿ ಪ್ರತ್ಯೇಕ ದಾವೆ ಸಲ್ಲಿಸುವ ಅಗತ್ಯವಿರಲಿಲ್ಲವೆಂದು, ಘೋಷಣೆಗಾಗಿ ದಾವೆಯನ್ನು ಸಲ್ಲಿಸುವ ಮೂಲಕ ತಮ್ಮ ಸ್ವಾಮ್ಯವನ್ನು ಅವರು ಸಾಬೀತುಪಡಿಸಬೇಕು ಎಂಬುದು ಕಾನೂನಿಗೆ ವಿರುದ್ಧವಾಗಿದೆ ಎಂದು ಅಮಲ್ಜಾರಿ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

6. ಶ್ರೀ ಮನವೇಂದ್ರ ರೆಡ್ಡಿ ಮತ್ತು ಶ್ರೀ ಡಿ.ಪಿ. ಅಂಬೇಕರ್ ಅವರು ಈ ಮುಂದಿನ ಅಂಶಗಳನ್ನು ಕುರಿತು ವಾದಿಸಿದ್ದಾರೆ:

(6) ಭಾರತ ಸಂವಿಧಾನದ 227 ನೇ ಅನುಚ್ಛೇದ ಮೇರೆಗೆ ಸಲ್ಲಿಸಲಾದ ರಿಟ್ ಅರ್ಜಿಯಲ್ಲಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿರುವ ರಿಟ್ ಮೇಲ್ಮನವಿಯು ಸಮರ್ಥನೀಯವಾಗಿರುವುದಿಲ್ಲ.ಈ ಸಂಬಂಧದಲ್ಲಿ ಅವರು ರಾಧೇ ಶ್ಯಾಮ್ ಮತ್ತು ಇನ್ನೊಬ್ಬರು -ವಿರುದ್ಧ ಛುನಾಥ್ ಮತ್ತು ಇತರರು ' ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಶ್ರೀಮತಿ ಚ ಅಮೀರುನ್ನಿಸಾ ಮತ್ತು ಇನ್ನೊಬ್ಬರು ವಿರುದ್ಧ ಥಲಾಬ್ವಾಡಿ ಮಸೀದಿ ಮತ್ತು ಇತರರು ಮತ್ತು ಸರ್ದಾರ್ ವೀರನಗೌಡ ಪಾಟೀಲ್ ಮಹಿಳಾ ವೈದ್ಯ ಪೀಠ -ವಿರುದ್ಧ- ಬಸಂತ್ಕುಮಾರ್ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠಗಳ ಎರಡು ತೀರ್ಪುಗಳನ್ನು ಅವಲಂಬಿಸಿದ್ದಾರೆ.

(ii) ರಿಟ್ ಅರ್ಜಿಯಲ್ಲಿನ ಪ್ರಶ್ನಿತ ಆದೇಶವು ಸಿಪಿಸಿಯ 115 ನೇ ಪ್ರಕರಣದ ಮೇರೆಗೆ ಪರಿಷ್ಕರಣೆ ಯೋಗ್ಯವಾಗಿದೆ.ಈ ಹಿನ್ನೆಲೆಯಲ್ಲಿ, ರಿಟ್ ಅರ್ಜಿಯು ಸ್ವತಃ ಊರ್ಜಿತಯೋಗ್ಯವಾಗಿರಲಿಲ್ಲ.

(iii) ಡಿಗ್ರಿಯನ್ನು ಅಮಲ್ದಾರಿಗೊಳಿಸುವ ಯಾವುದೇ ಹಕ್ಕನ್ನು ಅವರು ಹೊಂದಿಲ್ಲವೆಂದು ನಿರ್ಣಯಿಸಿ, ಅಮಲ್ದಾರಿ ನ್ಯಾಯಾಲಯವು ಮೇಲ್ಮನವಿದಾರರ ಮೊದಲ ಅಮಲ್ಜಾರಿ ಅರ್ಜಿಯನ್ನು ವಜಾಗೊಳಿಸಿತ್ತು.ಅದೇ ಕಾರಣಕ್ಕಾಗಿ ಎರಡನೇ ಅಮಲ್ಜಾರಿ ಅರ್ಜಿಯನ್ನು ಸಹ ವಜಾಗೊಳಿಸಲಾಗಿತ್ತು.ಮೊದಲನೇ ಅಮಲ್ಜಾರಿ ಅರ್ಜಿಯನ್ನು ವಜಾಗೊಳಿಸುವ ಆದೇಶವನ್ನು ಪ್ರಶ್ನಿಸದೆ, ಮೇಲ್ಮನವಿದಾರರು ಎರಡನೇ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಬಾರದಾಗಿತ್ತು.ಮೊದಲನೇ ಅಮಲ್ದಾರಿ ಅರ್ಜಿಯ ವಜಾಗೊಳಿಸುವಿಕೆಯು, ಎರಡನೇ ಅಮಲ್ನಾರಿಗೆ ಪೂರ್ವ ನ್ಯಾಯ ನಿರ್ಣಯವಾಗಿ ಕಾರನಿರ್ವಹಿಸುತ್ತದೆ ಮತ್ತು ಈ ಸಂಬಂಧದಲ್ಲಿ ಅವರು ಗಣಪತ್ ಸಿಂಗ್ (ಮೃತ) ಅವರ ಕಾನೂನು ಸಮ್ಮತ ಪ್ರತಿನಿಧಿಗಳು -ವಿರುದ್ಧ ಕೈಲಾಶ್ ಶಂಕರ್ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.ಆದುದರಿಂದ, ಈ ರಿಟ್ ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.

7. ಶ್ರೀ ಅಮೀತ್ ಕುಮಾರ್ ದೇಶಪಾಂಡೆ ಅವರು ಈ ಮುಂದಿನಂತೆ ಉತ್ತರಿಸಿದ್ದಾರೆ:

( ಎ) ಸದರಿ ಆದೇಶವು ಸಂಪೂರ್ಣವಾಗಿ ತಪ್ಪಾಗಿರುವುದರಿಂದ ಮತ್ತು ಕಾನೂನಿಗೆ ವಿರುದ್ಧವಾಗಿರುವುದರಿಂದ, ಮೊದಲನೇ ಅಮಲ್ಜಾರಿ ಅರ್ಜಿಯನ್ನು ವಜಾಗೊಳಿಸಿರುವುದನ್ನು ಪ್ರಶ್ನಿಸುವ ಅಗತ್ಯವೇ ಇರಲಿಲ್ಲ.

(ಬಿ) ಅಮಲ್ಜಾರಿ ನ್ಯಾಯಾಲಯದ ಆದೇಶವು ಸಿಪಿಸಿಯ 115 ನೇ ಪ್ರಕರಣದ ಮೇರೆಗೆ ಪರಿಷ್ಕರಣಾಯೋಗ್ಯವಾಗಿರುವುದಿಲ್ಲ.ಅವರು ಸಿಪಿಸಿಯ 115 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಪರಂತುಕವನ್ನು ಉಲ್ಲೇಖಿಸಿ, ಪರಿಷ್ಕರಣಾ ಅರ್ಜಿಗೆ ಅವಕಾಶ ನೀಡಿದರೆ, ಅದು ವ್ಯವಹರಣೆಯ ಮರುಪ್ರಾರಂಭದಲ್ಲಿ ಪರಿಣಮಿಸಬಾರದು ಮತ್ತು ಅದಕ್ಕೆ ಬದಲಾಗಿ ಅದು ವ್ಯವಹರಣೆಯು ಕೊನೆಗೊಳ್ಳುವುದರಲ್ಲಿ ಪರಿಣಮಿಸಬೇಕು ಮತ್ತು ಆ ಸಂದರ್ಭದಲ್ಲಿ ಮಾತ್ರವೇ ಪರಿಷ್ಕರಣೆಯು ಸಮರ್ಥನೀಯವಾಗಿರುತ್ತದೆಂದು ನಿವೇದಿಸಿಕೊಂಡಿದ್ದಾರೆ.ಈ ಮೊಕದ್ದಮೆಯಲ್ಲಿ, ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಅದಕ್ಕೆ ಅವಕಾಶ ನೀಡಿದ್ದರೆ, ಅದು ಅಮಲ್ಜಾರಿಯ ಮರುಪ್ರಾರಂಭದಲ್ಲಿ ಹಾಗೂ ಅದನ್ನು ಕೊನೆಗೊಳಿಸುವುದರಲ್ಲಿ ಪರಿಣಮಿಸಬೇಕಿತ್ತಾದ್ದರಿಂದ, ಸಿಪಿಸಿಯ 115 ನೇ ಪ್ರಕರಣದ ಮೇರೆಗೆ ಪರಿಷ್ಕರಣೆಯು ಸಮರ್ಥನೀಯವಾಗಿರುವುದಿಲ್ಲ.ಭಾರತ ಸಂವಿಧಾನದ 227 ನೇ ಅನುಚ್ಛೇದದ ಮೇರೆಗೆ ರಿಟ್ ಅರ್ಜಿ ಮಾತ್ರವೇ ಪರಿಹಾರವಾಗಿದೆ.

(ಸಿ) ತಮ್ಮಣ್ಣ ಮತ್ತು ಇತರರು -ವಿರುದ್ಧ-ಕು.ರೇಣುಕಾ ಮತ್ತು ಇತರರು ಐಎಲ್ಆರ್ 2009 ಕೆಎಆರ್ 1207, ಈ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠದ ನಿರ್ಣಯದಲ್ಲಿ, ಯಾವ ವಿಷಯಗಳಲ್ಲಿ ಸಿಪಿಸಿಯ 115 ನೇ ಪ್ರಕರಣವು ಅನ್ವಯವಾಗದಿಲ್ಲವೋ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1961 ರ 8 ನೇ ಪ್ರಕರಣದ ಮೇರೆಗೆ ನಿಯಂತ್ರಿಸಲಾಗುವುದಿಲ್ಲವೋ, ಆ ವಿಷಯಗಳ ಸಂಬಂಧದಲ್ಲಿ ಭಾರತ ಸಂವಿಧಾನದ 226 ನೇ ಮತ್ತು 227 ನೇ ಅನುಚ್ಛೇದಗಳೊಂದಿಗೆ ಓದಲಾದ ಕರ್ನಾಟಕ ಉಚ್ಚ 0 ನ್ಯಾಯಾಲಯದ 9(xii) ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯ ಅಧಿನಿಯಮದ 10 (iv-ಎ) ನೇ ಪ್ರಕರಣಕ್ಕನುಸಾರವಾಗಿ ಅಪೀಲನ್ನು ಸಲ್ಲಿಸಬೇಕಾಗುತ್ತದೆ ಎಂಬ ಸ್ಪಷ್ಟ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿದೆ.ಆದುದರಿ ಂ ದ, ಈ ರಿಟ್ ರಿಟ್ ಮೇಲ್ಮನವಿಂತು ಅತ್ಯಂತ ಹೆಚ್ಚು ಸಮರ್ಥನೀಯವಾದುದಾಗಿದೆ.

8. ನಾವು ವಾದಗಳನ್ನು ಪರಿಗಣಿಸಿದ್ದೇವೆ.

9. ಮೊದಲನೆಯದಾಗಿ, ನಾವು ಈ ಮೇಲ್ಮನವಿಯ ಸಮರ್ಥನೀಯತೆ ಕುರಿತು ವ್ಯವಹರಿಸಲು ಇಚ್ಛಿಸುತ್ತೇವೆ.ರಾಧೇ ಶ್ಯಾಮ್ (ಮೇಲೆ ಹೇಳಲಾದ) ಮೊಕದ್ದಮೆಯು, ಭಾರತ ಸಂವಿಧಾನದ 226 ನೇ ಮತ್ತು 227 ನೇ ಅನುಚ್ಛೇದಗಳ ಮೇರೆಗಿನ ರಿಟ್ ಅರ್ಜಿಯ ವ್ಯಾಪ್ತಿ ಕುರಿತು ವ್ಯವಹರಿಸುತ್ತದೆ.227 ನೇ ಅನುಚ್ಛೇದಗಳ ಮೇರೆಗಿನ ವ್ಯವಹರಣೆಗಳು ಮೇಲ್ವಿಚಾರಣಾ ಸ್ವರೂಪದ್ದಾಗಿದ್ದರೆ, 226 ನೇ ಅನುಚ್ಛೇದದ ಮೇರೆಗಿನ ವ್ಯವಹರಣೆಗಳು ಉಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಯ ಚ ಚಲಾವಣೆಯನ್ನು ಕುರಿತಾಗಿವೆ ಎಂಬುದನ್ನು ಸರ್ವೋಚ್ಚ ನ್ಯಾಯಾಲಯವು ಅತ್ಯಂತ ಸ್ಪಷ್ಟವಾಗಿ ಹೇಳಿದೆ.ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ, ಉಚ್ಚ ನ್ಯಾಯಾಲಯವು ಪ್ರಶ್ನಿತ ವ್ಯವಹರಣೆಗಳನ್ನು, ತೀರ್ಪನ್ನು ಅಥವಾ ಆದೇಶವನ್ನು ಚ ರದ್ದುಗೊಳಿಸಬಹುದು ಅಥವಾ ತಳ್ಳಿಹಾಕಬಹುದು ಮಾತ್ರವಲ್ಲದೆ, ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳು ಖಾತರಿಪಡಿಸಬಹುದಾದಂಥ ನಿರ್ದೇಶನಗಳನ್ನು ಸಹ ನೀಡಬಹುದು.

10. ತಮ್ಮಣ್ಣ (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠವು, ಭಾರತ ಸಂವಿಧಾನದ 227 ನೇ ಅನುಚ್ಛೇದದ ಮೇರೆಗೆ ಏಕ ಪೀಠ ನ್ಯಾಯಾಧೀಶರು ನೀಡಿದ ತೀರ್ಪಿನ ವಿರುದ್ಧ ಉಚ್ಚ

ನ್ಯಾಯಾಲಯ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ಮೇಲ್ಮನವಿಯು ಸಮರ್ಥನೀಯವಲ್ಲವೆಂದು ನಿರ್ಣಯಿಸಿದೆಯಾದರೂ, 14 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"14. ತತ್ಪರಿಣಾಮವಾಗಿ, ಸಿಪಿಸಿಯ 115 ನೇ ಪ್ರಕರಣವನ್ನು ಅನ್ವಯಿಸಿ ಅಂತಿಮವಾಗಿ ವಿಲೇ ಮಾಡಿರದ ಮತ್ತು ಕರ್ನಾಟಕ ಉಚ್ಚ ಚ ನ್ಯಾಯಾಲಯದ 8 ನೇ ಪ್ರಕರಣದ ಅಡಿಯಲ್ಲಿ ನಿಯಂತ್ರಿತವಾಗುವ ದಾವೆ ಅಥವಾ ಇತರ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ, ಉಚ್ಚ ನ್ಯಾಯಾಲಯದ ಅಧೀನ ನ್ಯಾಯಾಲಯವು ಹೊರಡಿಸಿದ ವಿವಾದವನ್ನು ನಿರ್ಧರಿಸಿ ಮಾಡಿದ ಆದೇಶದ ವಿರುದ್ಧ ಉದ್ಭವಿಸಿದ ವಿಷಯದಲ್ಲಿ ಭಾರತ ಸಂವಿಧಾನದ 227 ನೇ ಅನುಚ್ಛೇದದ ಮೇರೆಗೆ ಪ್ರದತ್ತವಾದ ಅಧಿಕಾರದ ಚಲಾವಣೆಯಲ್ಲಿ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ ಚ 4 ನೇ ಪ್ರಕರಣದ ಮೇರೆಗೆ ಯಾವುದೇ ಮೇಲ್ಮನವಿಗೆ ಅವಕಾಶವಿರುವುದಿಲ್ಲ; ಮತ್ತು ಸಿಪಿಸಿಯ 115 ನೇ ಪ್ರಕರಣ ಅನ್ವಯವಾಗದಿರುವ ಇತರ ಎಲ್ಲಾ ವಿಷಯಗಳಲ್ಲಿ, ಭಾರತ ಸಂವಿಧಾನದ 226 ನೇ ಮತ್ತು 227 ನೇ ಅನುಚ್ಛೇದಗಳೊಂದಿಗೆ ಓದಲಾಗುವ ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ 9(xii) ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶದ ವಿರುದ್ಧ 10 (iv-ಎ) ಪ್ರಕರಣದ ಮೇರೆಗೆ ಹಾಗೂ ರಿಟ್ ವ್ಯವಹರಣೆಗಳ ನಿಯಮಗಳ 2 ( 1), 26 ಮತ್ತು 39 ನೇ ನಿಯಮಗಳ ಮೇರೆಗೆ ಅಷ್ಟೇ ಅಲ್ಲದೆ ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯಮಾಪನ ಅಧಿನಿಯಮ, 1958 ರ II ನೇ ಅನುಸೂಚಿಯ 11 (ಎಸ್ಎ) ಪರಿಚ್ಛೇದದ ಮೇರೆಗೆ ಮೇಲ್ಮನವಿಗೆ ಅವಕಾಶವಿರುತ್ತದೆ. "

11. ಮೇಲೆ ಉದ್ಧೃತ ಭಾಗದಲ್ಲಿರುವಂತೆ 14 ನೇ ಕಂಡಿಕೆಯಲ್ಲಿನ ಅಭಿಪ್ರಾಯವು, ಸಿಪಿಸಿಯ 115 ನೇ ಪ್ರಕರಣ ಮತ್ತು ಉಚ್ಚ ನ್ಯಾಯಾಲಯ ಅಧಿನಿಯಮದ 8 ನೇ ಜ ಪ್ರಕರಣವು ಸಹಜವಾಗಿಯೇ ಅನ್ವಯವಾಗದಿರುವ ವಿಷಯಗಳ ಸಂಬಂಧದಲ್ಲಿ ರಿಟ್ ಮೇಲ್ಮನವಿಯು ಸಹ ಸಮರ್ಥನೀಯವೆಂದು ಸೂಚನೆ ನೀಡುತ್ತದೆ.ಆದಾಗ್ಯೂ, ಸರ್ದಾರ್ ವೀರನಗೌಡ ಪಾಟೀಲ್ (ಮೇಲೆ ಹೇಳದ) ಮತ್ತು ಅಮೀರುನ್ನಿಸಾ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ ಸಮನ್ವಯ ಪೀಠಗಳ ಇತ್ತೀಚಿನ ತೀರ್ಪುಗಳಲ್ಲಿ, ಭಾರತ ಸಂವಿಧಾನದ 227 ನೇ ಅನುಚ್ಛೇದದ ಮೇರೆಗಿನ ಅಧಿಕಾರವನ್ನು ಚಲಾಯಿಸಿ ಏಕ ಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶದ ವಿರುದ್ಧ ರಿಟ್ ಮೇಲ್ಮನವಿಗಳು ಸಮರ್ಥನೀಯವಲ್ಲವೆಂದು ಅಭಿಪ್ರಾಯಪಡಲಾಗಿದೆ.ಆದುದರಿಂದ, ಈ ರಿಟ್ ಮೇಲ್ಮನವಿಗಳು ಸಮರ್ಥನೀಯವಲ್ಲವೆಂದು ನಾವು ಅಭಿಪ್ರಾಯಪಡುತ್ತೇವೆ.

12. ರಿಟ್ ಮೇಲ್ಮನವಿಯು ಸಮರ್ಥನೀಯವಲ್ಲವೆಂದು ನಾವು ಅಭಿಪ್ರಾಯ ಪಟ್ಟಿರುವುದರಿಂದ, ಪ್ರಶ್ನಿತ ಆದೇಶವು ಪರಿಷ್ಕರಣೆ ಯೋಗ್ಯವೇ ಅಥವಾ ಅಲ್ಲವೇ ಎಂಬ ವಾದದ ಇತರ ಅಂಶಗಳನ್ನು ಕುರಿತು ಚರ್ಚಿಸುವ ಅಗತ್ಯವಿದೆ ಎಂದು ನಾವು ಭಾವಿಸುವುದಿಲ್ಲ.

13. ಮೇಲ್ಮನವಿದಾರರು, ಮೊದಲನೇ ಅಮಲ್ಜಾರಿ ಅರ್ಜಿಯನ್ನು ವಜಾಗೊಳಿಸಿರುವುದನ್ನು ಪ್ರಶ್ನಿಸದೆ ಎರಡನೇ ಅಮಲ್ದಾರಿಯನ್ನು ಪ್ರಾರಂಭಿಸಲಾಗುವುದಿಲ್ಲ ಎಂಬ ಶ್ರೀ ಮನವೇಂದ್ರ ರೆಡ್ಡಿ ಮತ್ತು ಶ್ರೀ ಡಿ. ಪಿ. ಅಂಬೇಕರ್ ಅವರ ವಾದಾಂಶವನ್ನು ಸಹ ನಾವು ಎತ್ತಿಹಿಡಿಯುತ್ತೇವೆ.ಅಮಲ್ಜಾರಿಯನ್ನು ಪ್ರಾರಂಭಿಸಿದ ನ್ಯಾಯಾಲಯವು ಅದರ ಡಿಕ್ರಿಯನ್ನು ಅಮಲ್ದಾರಿಗೊಳಿಸಲು ಸಕ್ಷಮವಾಗಿದೆ ಎಂಬುದು ಅವಿವಾದಿತ.ಅಧಿಕಾರವ್ಯಾಪ್ತಿಯ ಅಂತರ್ನಿಹಿತ ಲೋಪವಾಗಿರಲಿಲ್ಲ.ಮೇಲ್ಮನವಿದಾರನಿಗೆ ಅಮಲ್ದಾರಿಗೊಳಿಸಬಹುದಾದ ಹಕ್ಕು ಇರಲಿಲ್ಲವೆಂಬುದು ಅದರ ಏಕಮಾತ್ರ ಅಭಿಪ್ರಾಯವಾಗಿದೆ; ಸಹಜವಾಗಿಯೇ ಅಥವಾ ಅಭಿಪ್ರಾಯವು

ತಪ್ಪಾದುದಾಗಿದೆಯಾದರೂ, ಮೇಲ್ಮನವಿದಾರರು ಆ ಆದೇಶವನ್ನು ಪ್ರಶ್ನಿಸಬಹುದಾಗಿತ್ತು.ಆದೇಶವು ಎಷ್ಟೇ ತಪ್ಪು ಅಥವಾ ಕಾನೂನುಬಾಹಿರವಾಗಿ ಇರಬಹುದಾದರೂ, ಅದನ್ನು ಸಕ್ಷಮ ನ್ಯಾಯಾಲಯವು ಹೊರಡಿಸಿದ್ದರೆ, ಅದರಿಂದ ಬಾಧಿತರಾದ ಪಕ್ಷಕಾರರು ಅದನ್ನು ಪ್ರಶ್ನಿಸಬೇಕು.ಈ ಸಂದರ್ಭದಲ್ಲಿ, ಗಣಪತ್ ಸಿಂಗ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಸೂಕ್ತವಾಗಿದ್ದು, ಅದರಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

" ಮಾರಾಟವನ್ನು ರದ್ದುಪಡಿಸಲು ಅರ್ಜಿಯನ್ನು ಸಲ್ಲಿಸಿದಾಗ, ಅರ್ಜಿಯನ್ನು ಪುರಸ್ಕರಿಸಿ ಅಥವಾ ವಜಾಗೊಳಿಸಿ ಅಮಲ್ದಾರಿ ನ್ಯಾಯಾಲಯವು ಹೊರಡಿಸಿದ ಆದೇಶವು, ಸ ಂ ಹಿತೆಯ ಉಪಬಂಧಗಳ ಮೇರೆಗೆ ಸಲ್ಲಿಸಬಹುದಾದ ಮೇಲ್ಮನವಿಗೆ ಒಳಪಟ್ಟು ಅಂತಿಮವಾದುದಾಗಿರುವುದು ಮತ್ತು ಪರಿಣಾಮಕಾರಿಯಾಗಿರುವುದು.ಮಾರಾಟವನ್ನು ರದ್ದುಪಡಿಸಲು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿ ಮಾಡಿದ ಆದೇಶದ ವಿರುದ್ಧ ಯಾವುದೇ ಮೇಲ್ಮನವಿಯನ್ನು ಸಲ್ಲಿಸದೇ ಇದ್ದರೂ, ಈ ಮೊದಲು ರದ್ದು ಪಡಿಸುವ ಆದೇಶವನ್ನು ಹೊಂದಿರದೆಯೂ ಮಾರಾಟವನ್ನು ರದ್ದು ಪಡಿಸುವ ಮತ್ತೊಂದು ಅರ್ಜಿಯನ್ನು ಸಲ್ಲಿಸಬಹುದಾಗಿದೆ.ಅಂಥ ಅರ್ಜಿಯನ್ನು ಪೂರ್ವ ನ್ಯಾಯ ನಿರ್ಣಯದ ತತ್ವದಿಂದ ತಡೆಯಲಾಗುವುದು.

14. ಮೇಲ್ಮನವಿದಾರರು ಮೊದಲನೇ ಅಮಲ್ದಾರಿ ಅರ್ಜಿಯನ್ನು ವಜಾಗೊಳಿಸಿರುವುದನ್ನು ಪ್ರಶ್ನಿಸಬೇಕಿತ್ತು ಎಂದು ಮೇಲೆ ಅಭಿಪ್ರಾಯಪಟ್ಟಿರುವುದಕ್ಕೆ, ಸಮಾನಾಂತರ ವ್ಯವಹರಣೆಯಲ್ಲಿ ಮೇಲ್ಮನವಿದಾರರನ್ನು ಚಂದಮ್ಮಳ ಕಾನೂನುಸಮ್ಮತ ಉತ್ತರಾಧಿಕಾರಿ ಎಂದು ಪರಿಗಣಿಸುವುದಕ್ಕೆ ಅವರಿಗೆ ಅನುಮತಿ ನೀಡಲಾಗಿತ್ತು ಎಂಬ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡು, ಮೇಲ್ಮನವಿದಾರರ ಅಮಲ್ದಾರಿಗೊಳಿಸಬಹುದಾದ ಹಕ್ಕನ್ನು ಕುರಿತು ನಾವು ವ್ಯವಹರಿಸಲಿಚ್ಛಿಸುತ್ತೇವೆ.ಅಮಲ್ದಾರಿ ನ್ಯಾಯಾಲಯವು ಈ ಅಂಶವನ್ನು ಗಮನಿಸಿರುವುದಿಲ್ಲ.ಚಂದಮ್ಮಳು ಬರೆದುಕೊಟ್ಟಿರುವರೆಂದು ಹೇಳಲಾದ ಉಯಿಲಿನ ಆಧಾರದ ಮೇಲೆ ತನ್ನ ಸ್ವಾಮ್ಯದ ಘೋಷಣೆಯನ್ನು ಪಡೆಯಲು ಮೇಲ್ಮನವಿದಾರರಿಗೆ ನಿರ್ದೇಶಿಸದೆ, ಅಮಲ್ದಾರಿ ನ್ಯಾಯಾಲಯವು, ಸಿಪಿಸಿಯ XXI ನೇ ಕ್ರಮಾದೇಶದ 32 ನೇ ನಿಯಮದ ಮೇರೆಗಿನ ಅಗತ್ಯತೆಯನ್ನು ಈಡೇರಿಸುವುದಕ್ಕೆ ಒಳಪಟ್ಟು ಡಿಕ್ರಿಯನ್ನು ಅಮಲ್ದಾರಿಗೊಳಿಸಲು ಮೇಲ್ಮನವಿದಾರರಿಗೆ ಅನುಮತಿ ನೀಡಬಹುದಾಗಿತ್ತು.ಈ ಮುಂದಿನ ಕಾರಣಗಳಿಗಾಗಿ ಇದನ್ನು ಹೇಳಲಾಗಿದೆ.

15. ಚಂದಮ್ಮಳು ಹೂಡಿದ ದಾವೆಸಂಖ್ಯೆ: ಒಎಸ್ 70/1992 ರಲ್ಲಿನ ಡಿಕ್ರಿಯನ್ನು ಪ್ರಶ್ನಿಸಿ ಪ್ರತಿವಾದಿಗಳು ಮೇಲ್ಮನವಿಸಂಖ್ಯೆ: ಆರ್ಎ 3/1997 ನ್ನು ಸಲ್ಲಿಸಿದಾಗ, ಆಕೆಯು ಜೀವಂತರಿದ್ದರೆಂದು ತಿಳಿದುಬರುತ್ತದೆ.ದಾವೆಸಂಖ್ಯೆ: ಒಎಸ್ 15/1992 ನ್ನು ವಜಾಗೊಳಿಸಿದ್ದರಿಂದ ಬಾಧಿತರಾದ 3 ನೇ ಪ್ರತಿವಾದಿಗಳು ಸಲ್ಲಿಸಿದ ಮೇಲ್ಮನವಿಸಂಖ್ಯೆ: 219/2002 ಇತ್ಯರ್ಥದಲ್ಲಿರುವಾಗ ಅವರು ಮೃತರಾಗಿದ್ದಾರೆ.ಅವನು ಚಂದಮ್ಮಳ ದತ್ತು ಸ್ವೀಕೃತ ಮಗನೆಂಬ ಘೋಷಣೆಯ ವಿರುದ್ಧ 3 ನೇ ಪ್ರತಿವಾದಿಯು ದಾವೆ ಸಲ್ಲಿಸಿದ್ದರು.ಸಂಗತಿಗಳು ಬಹಿರಂಗಪಡಿಸುವಂತೆ, ಆರ್ಎಸಂಖ್ಯೆ: 219/2002 ಇತ್ಯರ್ಥದಲ್ಲಿರುವಾಗ ಅವರು ಮೃತರಾದಾಗ, ಚಂದಮ್ಮಳು ಮೇಲ್ಮನವಿದಾರರ ಪರವಾಗಿ ಬರೆದುಕೊಟ್ಟಿರುವರೆಂದು ಹೇಳಲಾದ ಉಯಿಲಿನ ಆಧಾರದ ಮೇಲೆ ಸದರಿ ಮೇಲ್ಮನವಿಯಲ್ಲಿ ತನ್ನನ್ನು ದಾಖಲೆಗೆ ತರಬೇಕೆಂದು ಮೇಲ್ಮನವಿದಾರರು ಕೋರಿದ್ದರು.ಅಮಲ್ದಾರಿ ನ್ಯಾಯಾಲಯವು ಹೊರಡಿಸಿದ ಆದೇಶದಿಂದ ತಿಳಿದುಬರುವಂತೆ, ಸದರಿ ಮೇಲ್ಮನವಿಯಲ್ಲಿ ಮೇಲ್ಮನವಿದಾರರ ಹೆಸರನ್ನು ಸೇರಿಸುವ ಮೊದಲು ವಿಚಾರಣೆ ನಡೆಸಿ, ನಂತರ ಮಾತ್ರವೇ ಅವರನ್ನು ದಾಖಲೆಗೆ ಸೇರಿಸುವ ಕುರಿತು

ಅವರಿಗೆ ಅನುಮತಿ ನೀಡಲಾಗಿತ್ತೆಂದು ಕಂಡುಬರುತ್ತದೆ.ಉಯಿಲಿನ ಆಧಾರದ ಮೇಲೆ ಕಾನೂನಾತ್ಮಕ ಉತ್ತರಾಧಿಕಾರವನ್ನು ಮೇಲ್ಮನವಿದಾರರು ಕ್ಲೇಮು ಮಾಡಿರುವುದರಿಂದ, ಸಹಜವಾಗಿಯೇ ದಾಖಲೆಯಲ್ಲಿ ಅವರು ಪಕ್ಷಕಾರರಾಗಿ ಸೇರಿರುವುದು ಸಿಪಿಸಿಯ XXII ನೇ ಕ್ರಮಾದೇಶದ 10 ನೇ ನಿಯಮಕ್ಕನುಗುಣವಾಗಿತ್ತು.ಸಮಾನಾಂತರ ವ್ಯವಹರಣೆಯಲ್ಲಿ ಅವರ ಹೆಸರನ್ನು ಕಾನೂನುಬದ್ಧ ಉತ್ತರಾಧಿಕಾರಿ ಎಂದು ಒಮ್ಮೆ ಸೇರಿಸಿದ್ದರಿಂದ, ತರುವಾಯದಲ್ಲಿ ಪ್ರತಿವಾದಿಗಳು ಒಎಸ್ಸಂಖ್ಯೆ: 70/1992 ರಲ್ಲಿನ ಡಿಕ್ರಿಯನ್ನು ಕಡೆಗಣಿಸಿರುವರೆಂದು ಅವರಿಗೆ ಕಂಡುಬಂದಿದ್ದರೆ ಮತ್ತು ಸಿಪಿಸಿಯ XXI ನೇ ಕ್ರಮಾದೇಶದ 32 ನೇ ನಿಯಮಕ್ಕನುಗುಣವಾಗಿ ಡಿಕ್ರಿಯನ್ನು ಬರೆದುಕೊಡಲು ಅವರು ಬಯಸಿದ್ದರೆ, ಯಾರಿಗೆ ಸ್ವಾಮ್ಯದ ಘೋಷಣೆಯ ಡಿಕ್ರಿಯನ್ನು ಮತ್ತು ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆಯೋ ಅವರ ಹೆಸರಿನಲ್ಲಿ ಚಂದಮ್ಮಳ ಕಾನೂನುಸಮ್ಮತ ಪ್ರತಿನಿಧಿಯಾಗಿ ಅದನ್ನು ಬರೆದುಕೊಡಬಹುದಾಗಿತ್ತು.ಸ್ವಾಮ್ಯವನ್ನು ಸಾಬೀತುಪಡಿಸಲು ಪ್ರತ್ಯೇಕ ದಾವೆಯನ್ನು ಹೂಡಲು ಅವರಿಗೆ ನಿರ್ದೇಶಿಸಿರುವುದು ಅತ್ಯಂತ ಕಿರಿಕಿರಿದಾಯಕವಾದ ಸಂಗತಿಯಾಗಿದೆ.ಸಿಪಿಸಿಯ 146 ನೇ ಪ್ರಕರಣವು ಡಿಕ್ಕಿಯನ್ನು ಬರೆದುಕೊಡಲು ಪ್ರತಿನಿಧಿಗೆ ಅಧಿಕಾರ ನೀಡುತ್ತದೆ.ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಅಮಲ್ಜಾರಿ ನ್ಯಾಯಾಲಯವು ಡಿಕ್ರಿಯನ್ನು ಅಮಲ್ದಾರಿಗೊಳಿಸುವ ಪ್ರತಿನಿಧಿಯ ಹಕ್ಕನ್ನು ಪುರಸ್ಕರಿಸಿದ ಸಂದರ್ಭದಲ್ಲಿ, ಸಿಪಿಸಿಯ 47 ನೇ ಪ್ರಕರಣಕ್ಕನುಸಾರ ಸ್ವತಃ ಅಮಲ್ಜಾರಿ ವ್ಯವಹರಣೆಗಳಲ್ಲಿ ವಿಚಾರಣೆಯನ್ನು ನಡೆಸಲು ಅಧಿಕಾರಹೀನವಾಗಿರುವುದಿಲ್ಲವೆಂದು ಹೇಳಬಹುದಾಗಿದೆ.47 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

"47. ಡಿಕ್ರಿಯನ್ನು ಅಮಲ್ಜಾರಿ ಮಾಡುವ ನ್ಯಾಯಾಲಯವು ನಿರ್ಧರಿಸಬೇಕಾದ ಪ್ರಶ್ನೆಗಳು:- ( 1) ಯಾವ ದಾವೆಯಲ್ಲಿ ಡಿಕ್ಕಿಯನ್ನು ಮಾಡಲಾಯಿತೋ ಆ ದಾವೆಯ ಪಕ್ಷಕಾರರ ಅಥವಾ ಅವರ ಪ್ರತಿನಿಧಿಗಳ ನಡುವೆ ಉದ್ಭವಿಸುವ ಮತ್ತು ಡಿಕ್ರಿಯ ಅಮಲ್ಜಾರಿಗೆ, ವಿಮೋಚನೆಗೆ ಅಥವಾ ನೆರವೇರಿಕೆಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು, ಡಿಕ್ಕಿಯನ್ನು ಅಮಲ್ಜಾರಿ ಮಾಡುವ ನ್ಯಾಯಾಲಯವು ನಿರ್ಧರಿಸತಕ್ಕದ್ದೇ ಹೊರತು, ಪ್ರತ್ಯೇಕ ದಾವೆಯ ಮೂಲಕವಲ್ಲ.

[ ( 2).***]

3. ಯಾರೇ ಒಬ್ಬ ವ್ಯಕ್ತಿಂು, ಒಬ್ಬ ಬ ಪಕ್ಷಕಾರನ ಬ ಪ್ರತಿನಿಧಿಯಾಗಿರುವನೇ ಅಥವಾ ಇಲ್ಲವೇ ಎಂಬ ಬಗ್ಗೆ ಪ್ರಶ್ನೆ ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಾಲಯವು ನಿರ್ಧರಿಸತಕ್ಕದ್ದು .

ವಿವರಣೆ I:..........................................

ವಿವರಣೆ II: ........................................"1

[ಒತ್ತು ನೀಡಲಾಗಿದೆ]

16. ಆದುದರಿಂದ, ಯಾರೇ ವ್ಯಕ್ತಿಯು ಪ್ರತಿನಿಧಿಯೇ ಅಥವಾ ಅಲ್ಲವೇ ಎಂಬುದನ್ನು ಸಿಪಿಸಿಯ 47 ನೇ ಪ್ರಕರಣದ 3 ನೇ ಉಪ-ಪ್ರಕರಣದಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಿದೆ.ಅಮಲ್ಜಾರಿ ನ್ಯಾಯಾಲಯವು ಸ್ವತಃ ಆ ಪ್ರಶ್ನೆಯನ್ನು ನಿರ್ಧರಿಸಲಾಗುವುದಿಲ್ಲ.

17. ಮೇಲ್ಮನವಿದಾರರು ಕಾನೂನಿನ ಪ್ರಕಾರ ಉಯಿಲನ್ನು ಸಾಬೀತುಪಡಿಸಬೇಕು ಅಥವಾ ರುಜುವಾತುಪಡಿಸಬೇಕೆಂದು ಅಮಲ್ಜಾರಿ ನ್ಯಾಯಾಲಯವು ನಿರ್ಣಯಿಸಿದೆ.ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪ್ರತಿವಾದಿಗಳ ವಿರುದ್ಧ ಮೇಲ್ಮನವಿದಾರರು ಉಯಿಲನ್ನು ರುಜುವಾತುಪಡಿಸುವ ಅಗತ್ಯವಿಲ್ಲ.ಒಬ್ಬರ ಹಕ್ಕನ್ನು ಸಾಬೀತುಪಡಿಸಲು ಅಥವಾ ಪ್ರತಿವಾದಿಸಲು ಉಯಿಲನ್ನು ಪ್ರತಿಪಾದಿಸಿದಾಗ ಅದನ್ನು ರುಜುವಾತುಪಡಿಸುವ ಅಗತ್ಯ ಉದ್ಭವಿಸುತ್ತದೆ.ಉದಾಹರಣೆಗೆ, ಒಬ್ಬ ವ್ಯಕ್ತಿಯು ಉಯಿಲಿನ ಆಧಾರದ ಮೇಲೆ ಅಥವಾ ವಿಭಜನೆಗಾಗಿನ ದಾವೆಯಲ್ಲಿ ಸ್ವಾಮ್ಯದ ಘೋಷಣೆಯನ್ನು ಕೋರಿದರೆ, ವಿಭಜನೆ ಕೋರಲು ವಾದಿಗೆ ಯಾವುದೇ ಹಕ್ಕು ಇಲ್ಲವೆಂಬ ತನ್ನ ವಾದದ ಸಮರ್ಥನೆಗೆ ಉಯಿಲನ್ನು ಮುಂದಿಡುತ್ತಾನೆ, ಅಂಥ ಸಂದರ್ಭಗಳಲ್ಲಿ ಮಾತ್ರವೇ ಉಯಿಲನ್ನು ರುಜುವಾತುಪಡಿಸುವ ಅಗತ್ಯವಿರುತ್ತದೆ.ಒಬ್ಬ ವ್ಯಕ್ತಿಯು ತನ್ನ ಹಕ್ಕನ್ನು ಸಾಬೀತುಪಡಿಸಲು ಅಥವಾ ಪ್ರತಿವಾದಿಸಲು ಉಯಿಲನ್ನು ಪ್ರತಿಪಾದಿಸದೆ ವಾದದಲ್ಲಿ ಅಥವಾ ಲಿಖಿತ ಹೇಳಿಕೆಯಲ್ಲಿ ಅದನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದರೆ, ಉಯಿಲನ್ನು ರುಜುವಾತುಪಡಿಸುವ ಅಗತ್ಯವಿರುವುದಿಲ್ಲ.ಇನ್ನೊಂದು ರೀತಿಯಲ್ಲಿ ಹೇಳುವುದಾದಲ್ಲಿ, ಸ್ವತ್ತಿಗೆ ಸಂಪೂರ್ಣವಾಗಿ ಅಪರಿಚಿತನಾಗಿರುವ ಅಥವಾ ಉಯಿಲು ಇಲ್ಲದಿರುವಲ್ಲಿ ಪಿತ್ರಾರ್ಜಿತದ ಅಥವಾ ಉತ್ತರಾಧಿಕಾರದ ಯಾವುದೇ ಅವಕಾಶವನ್ನು ಹೊಂದಿರದ ಅಥವಾ ಸ್ವತ್ತಿನಿಂದ ಯಾವುದೇ ಲಾಭವನ್ನು ಪಡೆಯದಿರುವ ಅಥವಾ ಉಯಿಲನ್ನು ಪ್ರಶ್ನಿಸುವ ಯಾವುದೇ ಹಕ್ಕನ್ನು ಹೊಂದಿರದ ಮೂರನೇ ವ್ಯಕ್ತಿಯ ವಿರುದ್ಧ ಉಯಿಲನ್ನು ರುಜುವಾತುಪಡಿಸಬೇಕಾಗಿಲ್ಲ.ಈ ಮೊಕದ್ದಮೆಯಲ್ಲಿ 3 ನೇ ಪ್ರತಿವಾದಿಯು ತಾನು ಚಂದಮ್ಮಳ ದತ್ತು ಸ್ವೀಕೃತ ಮಗನೆಂದು ಕ್ಲೇಮು ಮಾಡಿದ್ದು, ಪರಿಣಾಮದ ಘೋಷಣೆಗೆ ಸ ಂ ಬಂಧಿಸಿದ ಅವರ ದಾವೆಯನ್ನು ವಜಾಗೊಳಿಸಲಾಗಿತ್ತು ಮತ್ತು ಎರಡನೇ ಮೇಲ್ಮನ ವಿಯನ್ನು ವಜಾಗೊಳಿಸುವುದರೊಂದಿಗೆ ವಿಚಾರಣಾ ನ್ಯಾಯಾಲಯದ ತೀರ್ಪು ಅಂತಿಮತೆಯನ್ನು ತಲುಪಿತ್ತು.ಹಾಗಾಗಿ, ಅವರು ಉಯಿಲಿಗೆ ಸಂಪೂರ್ಣ ಅಪರಿಚಿತ ವ್ಯಕ್ತಿಯಾಗಿದ್ದು, ಅದನ್ನು ಪ್ರಶ್ನಿಸುವ ಹಕ್ಕನ್ನು ಹೊಂದಿರದ ವ್ಯಕ್ತಿಯಾಗಿರುವರೆಂಬುದು ಸ್ವಯಂವೇದ್ಯ.ವಿಷಯಕ್ಕೆ ಸಂಬಂಧಿಸಿದ ಈ ಅಂಶದ ಹಿನ್ನೆಲೆಯಲ್ಲಿ, ಇದರಲ್ಲಿನ ಮೇಲ್ಮನವಿದಾರರು ಒ.ಎಸ್.ಸಂಖ್ಯೆ: 70/1992 ರಲ್ಲಿನ ಡಿಕ್ರಿಯನ್ನು ಅಮಲ್ದಾರಿಗೊಳಿಸಲು ಅತ್ಯಂತ ಹೆಚ್ಚು ಸಕ್ಷಮರಾಗಿರುವರು.ಈ ಎಲ್ಲಾ ಸಂದರ್ಭಗಳನ್ನು ಗಮನಕ್ಕೆ ತೆಗೆದುಕೊಂಡು, ಚ ಮೇಲ್ಮನವಿದಾರರು ಮೊದಲನೇ ಅಮಲ್ಜಾರಿ ಅರ್ಜಿಯನ್ನು ವಜಾಗೊಳಿಸಿರುವುದನ್ನು ಪ್ರಶ್ನಿಸದೇ ಇದ್ದಾಗ್ಯೂ, ಡಿಕೆಯನ್ನು ಅಮಲ್ದಾರಿಗೊಳಿಸುವ ಅವರ ಹಕ್ಕು ಕೊನೆಗೊಂಡಿರಲಿಲ್ಲ ಹಾಗೂ ಭವಿಷ್ಯದಲ್ಲಿ ಡಿಕ್ರಿಯ ಯಾವುದೇ ಉಲ್ಲಂಘನೆಯ ಸಂದರ್ಭದಲ್ಲಿ, ಅವರು ಅಮಲ್ಜಾರಿ ಅರ್ಜಿಯನ್ನು ಹೂಡಬಹುದಾಗಿದೆ ಎಂದು ನಾವು ನಿರ್ಣಯಿಸಿದ್ದೇವೆ.

18. ರಿಟ್ ಮೇಲ್ಮನವಿಯು ಸಮರ್ಥನೀಯವಲ್ಲವೆಂದು ನಾವು ನಿರ್ಣಯಿಸಿರುವುದರಿಂದ, ಮೇಲೆ ಹೇಳಿದ ನಮ್ಮ ಅಭಿಪ್ರಾಯದ ಹೊರತಾಗಿಯೂ, ನಾವು ಈ ಮೇಲ್ಮನವಿಯನ್ನು ವಜಾಗೊಳಿಸಿದ್ದೇವೆ.